ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	38(24)
ಸದಸ್ಯರ ಹೆಸರು	:	ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	13-12-2021
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;</td><td>ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿನ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಈ ಕೆಳಕಂಡಂತಿವೆ-
1. ಸರ್ಕಾರಿ ಪದವಿ ಪೂರ್ವ ಕಾಲೇಜುಗಳು -11
2. ಅನುದಾನಿತ ಪದವಿ ಪೂರ್ವ ಕಾಲೇಜುಗಳು-02
3. ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳು -11</td></tr>
<tr><td>ಆ)</td><td>ಈ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಂಖ್ಯೆ ಎಷ್ಟು;</td><td>ಬೋಧಕ/ಬೋಧಕೇತರ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಮ ಸಂಖ್ಯೆ</th><th>ಕಾಲೇಜುಗಳ ವಿಧ</th><th>ಬೋಧಕ</th><th>ಬೋಧಕೇತರ</th><th>ಒಟ್ಟು</th></tr>
<tr><td>1</td><td>ಸರ್ಕಾರಿ</td><td>60</td><td>03</td><td>63</td></tr>
<tr><td>2</td><td>ಅನುದಾನಿತ</td><td>12</td><td>03</td><td>15</td></tr>
<tr><td>3</td><td>ಅನುದಾನ ರಹಿತ</td><td>91</td><td>11</td><td>102</td></tr>
</table></td></tr>
<tr><td>ಇ)</td><td>ಸಮರ್ಪಕವಾದ ರೀತಿಯಲ್ಲಿ ತರಗತಿಗಳನ್ನು ನಡೆಸಲು ಕಟ್ಟಡದ ವ್ಯವಸ್ಥೆ ಇದೆಯೇ? (ವಿಸ್ತೃತವಾದ ಮಾಹಿತಿ ಒದಗಿಸುವುದು)</td><td>ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸಮರ್ಪಕವಾದ ರೀತಿಯಲ್ಲಿ ತರಗತಿಗಳನ್ನು ನಡೆಸಲು ಪ್ರಸ್ತುತ ಕಟ್ಟಡ ವ್ಯವಸ್ಥೆ ಇರುತ್ತದೆ.

ಆದಾಗ್ಯೂ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ತರಗತಿ ಕೊಠಡಿಗಳ ಕೊರತೆಯಿದ್ದಲ್ಲಿ ಪ್ರೌಢಶಾಲಾ ಕಟ್ಟಡದ ಕೊಠಡಿಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಕ್ಕಡ, ಈ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಲ್ಲಿ 95 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 04 ತರಗತಿ ಕೊಠಡಿಗಳ ಕೊರತೆಯಿದ್ದು, ಪ್ರೌಢಶಾಲಾ ಕಟ್ಟಡದ ತರಗತಿ ಕೊಠಡಿಗಳನ್ನು ಬಳಸಿಕೊಳ್ಳಲಾಗುತ್ತಿದೆ.</td></tr>
</table>

ಸಂಖ್ಯೆ: ಇಡಿ 196 ಡಿಜಿಡಬ್ಲ್ಯೂ 2021

(ಬಿ.ಸಿ. ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು